(ಇ) ಬೆಂಗಳೂರು ನಗರದಲ್ಲಿರುವ ಚಿತಾಗಾರಗಳಿಂದ ಉಂಟಾಗುತ್ತಿರುವ ಪರಿಸರ ಮಾಲಿನ್ಯದ ಬಗ್ಗೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನ ಗುಡಿ): ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿರುವ ಚಿತಾಗಾರಗಳಿಂದ ಉಂಟಾಗುತ್ತಿರುವ ಪರಿಸರ ಮಾಲಿನ್ಯದ ಬಗ್ಗೆ ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ.ಜೆ.ಜಾರ್ಜ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು): ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯನ್ನು ಪಡೆದು ಈ ಕೆಳಕಂಡ ಹೇಳಿಕೆಯನ್ನು ಮಾಡುತ್ತಿದ್ದೇನೆ.

ಬೆಂಗಳೂರು ನಗರದಲ್ಲಿ ಹಾಲಿ (1) ವಿಲ್ಸನ್‌ಗಾರ್ಡನ್ ಹಿಂದೂ ಸ್ಮಶಾನ ಮತ್ತು (2) ಕಲ್ಲಹಳ್ಳಿ ಹಿಂದೂ ಸ್ಮಶಾನ. (3) ಮೈಸೂರು ರಸ್ತೆ ಹಿಂದೂ ಸ್ಮಶಾನ ಮತ್ತು (4) ಶ್ರೀರಾಮಪುರದ ಹರಿಶ್ಚಂದ್ರ ಘಾಟ್ - ಹಿಂದೂ ಸ್ಮಶಾನಗಳಲ್ಲಿ ಒಟ್ಟು ನಾಲ್ಕು ವಿದ್ಯುತ್ ಚಿತಾಗಾರಗಳಿವೆ. ಈ ಪ್ರತಿಯೊಂದು ಚಿತಾಗಾರದಲ್ಲೂ ಎರಡು ವಿದ್ಯುತ್ ಕುಲುಮೆಗಳಿವೆ. ಇವು ವರ್ಷದ ಎಲ್ಲಾ ದಿನಗಳಲ್ಲಿಯೂ ಕಾರ್ಯ ನಿರ್ವಹಿಸುತ್ತವೆ. ಈ ಚಿತಾಗಾರಗಳಲ್ಲಿ ಅಂದಾಜು ವಾರ್ಷಿಕ ಒಟ್ಟು 1100-1200 ರಷ್ಟು ದಹನ ಕಾರ್ಯವನ್ನು ನಡೆಸಲಾಗುತ್ತದೆ.

ಈ ಚಿತಾಗಾರಗಳನ್ನು ಸುಮಾರು 25 ವರ್ಷಗಳ ಹಿಂದೆ ಆಗ ಲಭ್ಯವಿದ್ದ ತಂತ್ರಜ್ಞಾನವನ್ನು ಅಳವಡಿಸಿ ನಿರ್ಮಿಸಲಾಗಿದೆ. ಈ ಚಿತಾಗಾರಗಳಲ್ಲಿ ದಹನಕ್ರಿಯೆ ನಡೆಯುವಾಗ ಹೊರ ಹೊಮ್ಮುವ ಕಾರ್ಬನ್ ಮಾನಾಕ್ಸೈಡ್ ಕಾರ್ಬನ್ ಡೈಆಕ್ಸೈಡ್ ಮುಂತಾದ ಅನಿಲಗಳು ಮತ್ತು ಧೂಳಿನ ಕಣಗಳಿಂದ ಕೂಡಿದ ಧೂಮದಿಂದ ಮಾಲಿನ್ಯ ಉಂಟಾಗುತ್ತದೆ.

ಪ್ರಸ್ತುತ ಈ ಚಿತಾಗಾರಗಳ ಸಮೀಪದಲ್ಲಿ ಜನ ವಸತಿಗಳು ಬಂದಿರುವುದರಿಂದ ಅವರಿಗೆ ಇಲಲಿಲ ನಡೆಯುವ ದಹನ ಕ್ರಿಯೆಗಳಿಂದ ಉಂಟಾಗುವ ತೊಂದರೆಯನ್ನು ನೀಗುವುದಕ್ಕಾಗಿ ಈ ಚಿತಾಗಾರಗಳ ಆಧುನೀಕರಣವನ್ನು ಕೈಗೊಳ್ಳಲಾಗಿದೆ.

ಮೈಸೂರು ರಸ್ತೆ, ಮತ್ತು ಶ್ರೀರಾಮಪುರದ ಸ್ಮಶಾನಗಳಲ್ಲಿನ ಚಿತಾಗಾರಗಳಿಗೆ ವೆಂಚರಿಸ್ಕ್ರಬರ್, ಸೆಪರೇಟರ್ ಮತ್ತು 100 ಅಡಿ ಎತ್ತರದ ಲೋಹದ ಚಿಮಣಿಗಳನ್ನು ಅಳವಡಿಸಿರುವುದರಿಂದ ಅಲ್ಲಿ ಉಂಟಾಗುತ್ತಿದ್ದ ಮಾಲಿನ್ಯವನ್ನು ತಡೆಗಟ್ಟಲಾಗಿದೆ. ಉಳಿದೆರಡು ಚಿತಾಗಾರಗಳನ್ನು ಆಧುನೀಕರಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಇವುಗಳ ಜೊತೆಗೆ ಬನಶಂಕರಿ ಹಿಂದೂ ಸ್ಮಶಾನ ಮತ್ತು ಬೊಮ್ಮನ ಹಳ್ಳಿಯ ನಗರ ಪಾಲಿಕೆಯ ನರ್ಸರಿಗಳಲ್ಲಿ ಅತ್ಯಂತ ಆಧುನಿಕ ರೀತಿಯಲ್ಲಿ ಚಿತಾಗಾರಗಳನ್ನು ನಿರ್ಮಿಸಲಾಗುತ್ತಿದೆ. ಇದರಿಂದ ಚಿತಾಗಾರಗಳಿಂದ ಉಂಟಾಗುವ ಮಾಲಿನ್ಯವನ್ನು ತಡೆಗಟ್ಟಬಹುದಾಗಿದೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಈಗಾಗಲೇ ವಿಲ್ಸನ್‌ಗಾರ್ಡನ್‌ನಲ್ಲಿ ಕ್ರೆಮೆಟೋರಿಯಂ ಇದೆ. ಹಾಫ್‌ಕಾಮ್ಸ್‌ನವರದು ಅದರ ಪಕ್ಕದಲ್ಲಿಯೇ ಹಣ್ಣು ತರಕಾರಿ ಮಳಿಗೆ ಇದೆ. ಹೆಚ್ಚಾಗಿ ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳಿಂದ ಅಲ್ಲಿಗೆ ತರುತ್ತಾರೆ. ಅಲ್ಲಿರತಕ್ಕ ಹಳೆಯ ಕಾಲದ ಕ್ರೆಮೆಟೋರಿಯಂ ಅನ್ನು ಆಧುನೀಕರಣ ಮಾಡಬೇಕೆಂದು ಈಗಾಗಲೇ

ಹೈಕೋರ್ಟ್‌ನಲ್ಲಿ ರಿಟ್ ಹಾಕಿ ಹೈಕೋರ್ಟ್‌ನಿಂದ ಡೈರೆಕ್ಷನ್ ಕೊಟ್ಟಿದ್ದಾರೆ. ಅಲ್ಲಿ ಹಣ್ಣು ತರಕಾರಿ ತೆಗೆದುಕೊಳ್ಳುವವರಿಗೆ ಮತ್ತು ಹಾಪ್‌ಕಾಮ್ಸ್‌ನಲ್ಲಿ ಕೆಲಸ ಮಾಡತಕ್ಕವರಿಗೆ ಕ್ರಿಮಿಟೋರಿಯಂನಿಂದ ಬರತಕ್ಕ ಧೂಳು ಮತ್ತು ಹೊಗೆಯಿಂದ ಎಫೆಕ್ಟ್ ಆಗಿದೆ. ಅಲ್ಲಿ ಕೆಲಸ ಮಾಡತಕ್ಕ ನೌಕರರು ಬಹಳ ತೊಂದರೆಯಲ್ಲಿದ್ದಾರೆ. ಆದಷ್ಟು ಬೇಗ ಕ್ರಿಮೆಟೋರಿಯಂ ಅನ್ನು ಅಲ್ಲಿಂದ ಬದಲಾವಣೆ ಮಾಡಬೇಕು ಅಥವಾ ಆಧುನೀಕರಣ ಮಾಡಬೇಕು. ಕ್ರಿಮಟೋರಿಯಂನ ಪಕ್ಕದಲ್ಲಿ ಲಾಲ್‌ಭಾಗ್ ಇದೆ. ಅದರಿಂದ ಲಾಲ್‌ಭಾಗ್‌ಗೂ ಬಹಳ ತೊಂದರೆಯಾಗಿದೆ. ಒಳ್ಳೆಯ ಹಣ್ಣು ತೆಗೆದುಕೊಳ್ಳುವುದಕ್ಕೆ ನಾವಿರಾರು ಜನರು ಲಾಲ್‌ಭಾಗ್‌ಗೆ ಹೋಗುತ್ತಾರೆ. ಅಲ್ಲಿ ಕ್ರಿಮೆಟೋರಿಯಂ ಇರುವುದರಿಂದ ಜನರು ಲಾಲ್‌ಭಾಗ್‌ಗೆ ಹೋಗಿ ಏನೂ ಪ್ರಯೋಜನವಾಗುತ್ತಿಲ್ಲ. ಹಾಪ್‌ಕಾಮ್ಸ್‌ನಲ್ಲಿ ಕೆಲಸ ಮಾಡತಕ್ಕವರಿಗೆ ತೊಂದರೆಯಾಗಿದೆ.

ಛೇರ್ಮನ್ : ಕ್ರಿಮಿಟೋರಿಯಂನಿಂದ ಪರಿಸರ ಹಾಳಾಗುತ್ತಿದೆ, ಅದನ್ನು ಆಧುನೀಕರಣ ಮಾಡಿ ಸರಿಮಾಡಿಯೆಂದು ಹೇಳಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಮಾನ್ಯ ಅಧ್ಯಕ್ಷರೆ, ಪರಿಸರದ ಬಗ್ಗೆ ಕೇಳುವುದಾದರೆ ಬೆಂಗಳೂರಿನ ಪರಿಸರವೇ ಹಾಳಾಗಿದೆ. ನಾನು ಶಾಸಕನಾಗುವುದಕ್ಕೆ ಮುಂಚೆ ಪರಿಸರದ ಬಗ್ಗೆ ನ್ಯಾಯಮೂರ್ತಿ ವಲ್ಲಿನಾರಾಯಣಸ್ವಾಮಿಯವರು ಚೆಕ್ ಮಾಡಿಸುತ್ತಿದ್ದರು. ಈಗ ಅದೆಲ್ಲಾ ಇಲ್ಲ. ಬಸ್ಸುಗಳು, ಲಾರಿಗಳು ವಾಹನಗಳನ್ನು ಚೆಕ್ ಮಾಡುತ್ತಿಲ್ಲ, ಪಲ್ಯೂಷನ್ ಜಾಸ್ತಿಯಾಗಿದೆ. ತಾವು ಏನಾದರೂ ಇಂಟರೆಸ್ಟ್ ತೆಗೆದುಕೊಂಡು ಪಲ್ಯೂಷನ್ ಕಡಿಮೆ ಮಾಡದಿದ್ದರೆ ತೊಂದರೆಯಾಗುತ್ತದೆ. ಪೊಲೀಸ್‌ನವರು ಎಲ್ಲಾ ಟ್ರಾಫಿಕ್ ಸಿಗ್ನಲ್ ಹತ್ತಿರ ಇರುವವರು ಮಾಸ್ಕ್ ಹಾಕಿಕೊಂಡಿರುತ್ತಾರೆ. ಇವತ್ತು ಬೆಂಗಳೂರಿನಲ್ಲಿ ಮಾಸ್ಕ್ ಇಲ್ಲದೆ ಎಲ್ಲೂ ಹೋಗುವುದಕ್ಕೆ ಆಗುವುದಿಲ್ಲ. ತಾವು ಹೆಚ್ಚಿನ ಆಸಕ್ತಿಯನ್ನು ತಾಳಿ ಬೆಂಗಳೂರಿನಲ್ಲಿ ಪರಿಸರವನ್ನು ಹಾಳು ಮಾಡದ ಹಾಗೆ ಒಳ್ಳೆಯ ಪರಿಸರ ಇರುವಂತೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ. ವಿಲ್ಸನ್‌ಗಾರ್ಡನ್ ಎಲೆಕ್ಟ್ರಿಕಲ್ ಕ್ರಿಮೆಟೋರಿಯಂ ಏನಿದೆ ಅದನ್ನು ಆಧುನೀಕರಣ ಮಾಡಿ ಜನರಿಗೆ ತೊಂದರೆಯಾಗದ ಹಾಗೆ ಮಾಡಬೇಕೆಂದು ಹೇಳುತ್ತೇನೆ. ಹಾಪ್‌ಕಾಮ್ಸ್‌ನವರು ಅಲ್ಲಿರುವುದಕ್ಕೆ ಆಗುತ್ತಿಲ್ಲ. ಇದು ಮಾನ್ಯ ಕೃಷ್ಣಪ್ಪನವರಿಗೆ ಗೊತ್ತಿದೆ. ಅದನ್ನು ಮುಚ್ಚಬೇಕಾದ ಪರಿಸ್ಥಿತಿ ಬಂದಿದೆ. ಹಾಪ್‌ಕಾಮ್ಸ್ ಹೆಡ್‌ಕ್ವಾರ್ಟರ್ಸ್ ಮುಚ್ಚಬೇಕಾಗುತ್ತದೆ. ಅದನ್ನು ತಾವು ಯಾವತ್ತಾದರೂ ನೋಡಿದ್ದೀರೋ ಏನೋ ಗೊತ್ತಿಲ್ಲ. ಬಹಳ ತೊಂದರೆಯಿದೆ ಅದನ್ನು ನೋಡಿ.

ಶ್ರೀ ಎಸ್. ಮುನಿರತ್ನಂನಾಯ್ಡು (ರಾಜಾಜಿನಗರ) : ಒಂದು ನಿಮಿಷ ನನಗೆ ಅವಕಾಶ ಕೊಡಬೇಕು. ಬೆಂಗಳೂರಿನಲ್ಲಿ ಚಿತಾಗಾರಗಳು ಫಸ್ಟ್ ವಿಲ್ಸನ್‌ಗಾರ್ಡನ್‌ನಲ್ಲಿ ಬಂತು. ಆಮೇಲೆ ಶ್ರೀರಾಂಪುರದಲ್ಲಿ ಬಂತು. ಈಗ ನಾಲ್ಕು ಇವೆ. ಇನ್ನು ಎರಡು ಕಟ್ಟುತ್ತಿದ್ದಾರೆ. ಒಂದಂತೂ ನಿಜ ಚಿತಾಗಾರಗಳ ಪಕ್ಕದಲ್ಲಿ ಜನ ವಸತಿ ಇದ್ದು ಮನೆಗಳು ಬಂದಿವೆ. ಚಿತಾಗಾರದಲ್ಲಿ ಹೆಣಗಳನ್ನು ಸುಟ್ಟಾಗ ಸುತ್ತಮುತ್ತ ಇರುವ ನಾಗರೀಕರಿಗೆ ನೆಮ್ಮದಿಯಿಲ್ಲ. ವಾಸನೆ, ಹೊಗೆ, ಧೂಳು ಅಪರಿಗೆ ನರಕ ಜೀವನವಾಗಿದೆ. ಶ್ರೀರಾಂಪುರದ ಹರಿಶ್ಚಂದ್ರ ಘಾಟ್‌ನಲ್ಲಿ ಸ್ಕ್ರೂಬರ್ ಮತ್ತು ನೂರು ಅಡಿ ಎತ್ತರದ ಚಿಮಣಿ ಹಾಕಿಸಿರುವುದರಿಂದ ಬೇಕಿದ್ದ 90 ರಷ್ಟು ತೊಂದರೆ ನಿವಾರಣೆಯಾಗಿದೆ. ಆ ವಾಸನೆ, ಹೊಗೆ, ಧೂಳು ಎಲ್ಲದರಿಂದ ಸಂಜೆ ಹೊತ್ತು ಊಟ ಮಾಡುವುದಕ್ಕೆ ಆಗುತ್ತಿರಲಿಲ್ಲ.

ಊಟದ ಪದಾರ್ಥಗಳ ಮೇಲೆ ಆ ಹೊಗೆ ಮೊಡದ ತರಹ ಬಂದು ಕುಳಿತುಕೊಳ್ಳುತ್ತಿತ್ತು. ಇವತ್ತು ಆ ಸುದ್ದಿಯಿಲ್ಲ, ಶಾರ್ಟ್‌ಟರ್ಮ್ ಮೆಷರ್ ಆಯಿತು. ಲಾಂಗ್‌ಟರ್ಮ್ ಮೆಷರ್‌ಗೆ ನಾನು ಸಲಹೆ ಕೊಡುತ್ತೇನೆ. ಈ ಚಿತಾಗಾರಗಳನ್ನು ಬೆಂಗಳೂರಿನಿಂದ ಆಚೆಗೆ ಬದಲಾವಣೆ ಮಾಡಬೇಕು. ರಾಷ್ಟ್ರೀಯ ಹೆದ್ದಾರಿಗಳು ಏನಿವೆ ಬಳ್ಳಾರಿ ರಸ್ತೆ ಇರಬಹುದು, ಮೈಸೂರು ರಸ್ತೆ ಇರಬಹುದು, ಮಂಗಳೂರು ರಸ್ತೆ ಇರಬಹುದು ಅಲ್ಲಿ ಒಂದೊಂದು ಕಡೆ ವಿದ್ಯುತ್ ಚಿತಾಗಾರಗಳನ್ನು ಮಾಡಿದರೆ ತೊಂದರೆ ನಿವಾರಣೆಯಾಗುತ್ತದೆ. ಅವುಗಳ ಸಂಖ್ಯೆಯನ್ನು ಜಾಸ್ತಿ ಮಾಡಬೇಕು. ನಾಲ್ಕೈದು ಎಕರೆ ಜಾಗ ತೆಗೆದುಕೊಂಡು ಅದರ ಸುತ್ತಲೂ ಮರಗಿಡಗಳನ್ನು ಬೆಳೆಸಿ ಎತ್ತರದ ಜಾಗದಲ್ಲಿ ಮಾಡಿದರೆ ಅನುಕೂಲವಾಗುತ್ತದೆ. ಅದರ ಸುತ್ತ ಮನೆಗಳನ್ನು ಕಟ್ಟುವುದಕ್ಕೆ ಬಿಡಬಾರದು. ಇದೊಂದು ರೆಮಿಡಿ ಎಂದು ನನಗನಿಸುತ್ತದೆ. ಇದು ನನ್ನ 20 ವರ್ಷಗಳ ಅನುಭವದ ಮಾತು. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೆ, ಇವತ್ತು ಬೆಂಗಳೂರು ನಗರದಲ್ಲಿ ಪ್ರತಿವರ್ಷ ಸುಮಾರು 35 ಸಾವಿರ ಮರಣಗಳು ಆಗುತ್ತಿವೆ. ಪ್ರತಿ ದಿವಸಕ್ಕೆ ಲೆಕ್ಕ ಹಾಕಿದರೆ ನೂರು ಶವಸಂಸ್ಕಾರ ಮಾಡತಕ್ಕ ಪರಿಸ್ಥಿತಿ ಒದಗಿದೆ. ನನ್ನ ಇಲಾಖೆ ಕ್ರೆಮೆಟೋರಿಯಂ ಕಟ್ಟತಕ್ಕ ಇಲಾಖೆಯಲ್ಲ. ನೋಡಪ್ಪ ತಪ್ಪು ಮಾಡಬಾರದು, ತಪ್ಪು ಮಾಡಿದರೆ ನೋಟೀಸ್ ಕೊಡುತ್ತೇವೆ. ಮತ್ತೆ ಅದೇ ಕೆಲಸ ಮುಂದುವರಿಸಿದರೆ, ಕೇಸ್ ಹಾಕತಕ್ಕ ಇಲಾಖೆ ನನ್ನದು. ಮಾನ್ಯ ಸುಬ್ಬಾರೆಡ್ಡಿಯವರು ಮತ್ತು ಸುರೇಶ್‌ಕುಮಾರ್‌ರವರು ವಸ್ತು ಸ್ಥಿತಿಯನ್ನು ಕೇಳಿದರು ಬೆಂಗಳೂರಿನಲ್ಲಿ ವಿಲ್ಸನ್‌ಗಾರ್ಡನ್‌ನಲ್ಲಿರತಕ್ಕ ಕ್ರೆಮೆಟೋರಿಯಂಗೆ ಮೊದಲು ವಿದ್ಯುತ್ ಚಿತಾಗಾರ ಬಂತು. ಅದರ ಮುಂದೆ ಹಾಪ್‌ಕಾಮ್ಸ್ ಇತ್ತೀಚೆಗೆ ಬಂದಿದೆ. ಅದರ ಪಕ್ಕದಲ್ಲಿ ಮನೆಗಳು ಬಂದಿವೆ. ಬಾಲ್‌ಬಾಗ್ ಕಡೆಗೆ ಸಹ ಮನೆಗಳು ಬಂದಿವೆ. ಬಾಲ್‌ಬಾಗ್‌ನಲ್ಲಿ ಸಿಲ್ವರ್‌ಜ್ಯುಬಿಲಿ ಹೌಸ್ ಇತ್ತೀಚೆಗೆ ಬಂದಿದೆ. ಅದೆಲ್ಲಾ ಹೊಸ ಹೊಸದಾಗಿ ಬಂದಿದೆ. ಸರ್ಕಾರ ಯಾವುದನ್ನೂ ಮುಚ್ಚಿಟ್ಟಿಲ್ಲ. ಇರತಕ್ಕ ಪರಿಸ್ಥಿತಿಯನ್ನು ಹೇಳಿದೆ. ಆದರೆ ಈ ಚಿತಾಗಾರಗಳನ್ನು ಬೆಂಗಳೂರಿನ ಹೊರಗೆ ಹಾಕಬೇಕೆನ್ನುವ ಸಲಹೆ ಏನಿದೆ ಅದು ಸಾಧುವಾದುದು. ಅದನ್ನು ಮಾಡಿಸತಕ್ಕ ಜವಾಬ್ದಾರಿ ನಗರದ ಶಾಸನಸಭಾ ಸದಸ್ಯರು ಮತ್ತು ನಗರಸಭಾ ಸದಸ್ಯರ ಮೇಲಿರತಕ್ಕ ಜವಾಬ್ದಾರಿ. ಅದನ್ನು ತಾವು ಸರಿಯಾಗಿ ನಿರ್ವಹಿಸತಕ್ಕ ಕೆಲಸವನ್ನು ಮಾಡಬೇಕೆಂದು ನಾನು ಈ ಸದನದ ಮೂಲಕ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಶವಸಂಸ್ಕಾರ ಮಾಡುವ ಜವಾಬ್ದಾರಿ ಇರುವಾಗ, ಶೇಕಡ 50 ರಷ್ಟು ಸಂಸ್ಕಾರ ಮಾಡಲಿಕ್ಕೆ ಸೌದೆಯನ್ನು ಬಳಸುತ್ತಿದ್ದಾರೆ ಆ ಮೂಲಕ ದಹನ ಕ್ರಿಯೆ ನಡೆಯುತ್ತಿದೆ.

7.20 ಪಿ.ಎಂ.

ಕೇವಲ 50ಕ್ಕೆ ಮಾತ್ರ ಇವತ್ತಿನ ದಿವಸ ಎಲೆಕ್ಟ್ರಿಕಲ್ ಕ್ರೆಮೆಟೋರಿಯಂನಲ್ಲಿ ಬಳಕೆಯಾಗುತ್ತಿವೆ. ಆದ್ದರಿಂದ ಊರಿನ ಹೊರಗಡೆ ನಾಲ್ಕು ದಿಕ್ಕಿನಲ್ಲಿ, ಬಳ್ಳಾರಿ ದಿಕ್ಕಿನಲ್ಲಿ, ಮದ್ರಾಸ್ ರೋಡ್‌ನಲ್ಲಿ ಅಥವಾ ಮೈಸೂರು ರಸ್ತೆಯಲ್ಲಿ ಹೀಗೆ ಇತರ ಜಾಗಗಳಲ್ಲಿ ಮಾಡತಕ್ಕದ್ದು ಇದೆ. ಇಷ್ಟೇ ಅಲ್ಲ, ನಾನು ಹರಿಶ್ಚಂದ್ರಘಾಟ್ ಪಕ್ಕದಲ್ಲೇ ಇರತಕ್ಕವನು. ಸುರೇಶ್‌ಕುಮಾರ್ ಅವರೂ ಅಲ್ಲಿದ್ದಾರೆ. ನಮಗೆ ಅನುಭವ ಇದೆ. ಎಲ್ಲರಿಗೂ ಅಲ್ಲಿ ಸತ್ತವರು ಇಂತಹವರ

ಮಗ ಎಂದು ಬೋರ್ಡು ಹಚ್ಚಿತಕ್ಕಂಥ ಆಸಕ್ತಿ ಜಾಸ್ತಿಯಾಗಿ ಎಲ್ಲರೂ ಒಂದೊಂದು ಗೋರಿ ಕಟ್ಟಿಕೊಳ್ಳುತ್ತಿದ್ದಾರೆ. ಹೀಗಾದರೆ ಜಾಗ ಎಲ್ಲಿಂದ ಬರುತ್ತದೆ? ಇವತ್ತಿನ ದಿವಸ ಇದರ ಬಗ್ಗೆ ಕೂಡ ಚಿಂತನೆಯಾಗಬೇಕು. ಭೂಮಿ ಹೊರಟುಹೋಗಿದೆ. ಇನ್ನೊಂದು ಏನಾದರೂ ಆಗಬೇಕಾಗುತ್ತದೆ. ಇಲ್ಲದೇ ಹೋದರೆ ಇವತ್ತು ಹೂತ ಹೆಣವನ್ನು ನಾಳೆ ಮತ್ತೆ ಕಿತ್ತು ಹೂಳತಕ್ಕಂಥ ಪರಿಸ್ಥಿತಿ ಬರುತ್ತದೆ. ಇದರ ಜೊತೆಗೆ ನಾನು ಬೆಂಗಳೂರಿನಲ್ಲಿರತಕ್ಕಂಥ ಸ್ಮಶಾನಗಳನ್ನು ನೋಡಿದ್ದೇನೆ. ಹರಿಶ್ಚಂದ್ರ ಘಾಟ್ ಒಂದು ಬಿಟ್ಟರೆ ಬಾಕಿ ಅಷ್ಟು ಕ್ಲೀನ್ ಇಲ್ಲ. ಅದು ಮತ್ತು ಕಂಟೋನ್ಮೆಂಟ್‌ನಲ್ಲಿ ಒಂದು ಇದೆ, ಅದನ್ನು ಚೆನ್ನಾಗಿ ಇಟ್ಟಿದ್ದಾರೆ. ಬಾಕಿ ಎಲ್ಲವೂ ಕೂಡ ಒಳಗೆ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಅಂತಹ ಪರಿಸ್ಥಿತಿ ಇದೆ. ಆದ್ದರಿಂದ ಮುಖ್ಯಮಂತ್ರಿಗಳೂ ಕೂಡ ಬಜೆಟ್‌ನಲ್ಲಿ ಹೇಳಿದ್ದಾರೆ. ಈ ಪರಿಸ್ಥಿತಿ ಇಲ್ಲಿದ್ದರೆ, ತಮಗೆ ಗೊತ್ತು, ಹಳ್ಳಿಗಾಡಿನಲ್ಲಿ ಸ್ಮಶಾನಗಳಿಗೆ ಜಾಗವೇ ಇಲ್ಲ. ಬಡವರ ಹೆಣ ಹೂಳುವುದಕ್ಕೆ ತುಂಬಾ ಕಷ್ಟವಾಗುತ್ತದೆ. ಸರ್ಕಾರಿ ಭೂಮಿ ಇದ್ದರೆ ಸರಿ. ಇಲ್ಲದೇ ಹೋದರೆ ಯಾರಾದರೂ ಸಹೃದಯರು ತಮ್ಮ ಜಾಗದಲ್ಲಿ ಪರವಾಗಿಲ್ಲಪ್ಪ ಎಂದರೆ ಹೂಳುವುದಕ್ಕೆ ಸಾಧ್ಯವಾಗಬಹುದು. ಇಲ್ಲದಿದ್ದರೆ ಅನಾಮಧೇಯರನ್ನು ಹೊಳೆ, ಹಳ್ಳ ದಂಡೆಮೇಲೆ ಹೂಳಬೇಕಾಗುತ್ತದೆ. ಇಂತಹ ಪರಿಸ್ಥಿತಿ ಇರುವಾಗ ಸರ್ಕಾರಿ ಸ್ಮಶಾನಗಳನ್ನು ಸರ್ಕಾರಿ ಜಾಗಕೊಟ್ಟು ಮಾಡುತ್ತೇವೆ. ಸರ್ಕಾರಿ ಜಾಗ ಇಲ್ಲದಿದ್ದರೆ ಸರ್ಕಾರದಿಂದ ದುಡ್ಡು ಕೊಟ್ಟು ಕೊಂಡುಕೊಳ್ಳುತ್ತೇವೆ ಎನ್ನತಕ್ಕಂಥ ಮಾತನ್ನು ಅವರು ಏನು ಹೇಳಿದ್ದಾರೆ ಇದು ಸ್ವಾಗತಾರ್ಹ ಮತ್ತು ಮೆಚ್ಚಬೇಕಾದಂಥ ವಿಷಯ. ಆದ್ದರಿಂದ ಈ ಎಲೆಕ್ಟ್ರಿಕ್ ಕ್ರೆಮೆಟೋರಿಯಂಗಳು ಬೆಂಗಳೂರಿನಲ್ಲಿ ಎನಿವೆ ಅವುಗಳು ಆಧುನೀಕರಣವಾಗುತ್ತಿವೆ, ಅದು ಆಗಬೇಕು. ಮಾನ್ಯ ಸದಸ್ಯರು ಹೇಳಿದ ಹಾಗೆ ಇದೊಂದು ಶಾರ್ಟ್‌ಟರ್ಮ್ ಪಾಲಿಸಿ. ಇದು ಇವತ್ತು ನಾಳೆ ಆಗುತ್ತದೆ. ಲಾಂಗ್‌ಟರ್ಮ್ ಪಾಲಿಸಿ ಎಂದರೆ ಊರಿನಿಂದ ಹೊರಗೆ ಹೋಗಲೇಬೇಕಾಗುತ್ತದೆ. ಮತ್ತೆ ಶವಗಳನ್ನು ತೆಗೆದುಕೊಂಡುಹೋಗುವುದಕ್ಕೆ ಅನುಕೂಲಗಳನ್ನೂ ಕೂಡ ನಾವು ಮಾಡಬೇಕಾಗುತ್ತದೆ.

ಮಾನ್ಯ ಸದಸ್ಯರು : ವಾಹನಗಳನ್ನೂ ಕೂಡ ಜಾಸ್ತಿ ಮಾಡಬೇಕು.

ಶ್ರೀ ಕೆ.ಹೆಚ್. ರಂಗನಾಥ್ : ಇದು ಮಾಡಲೇಬೇಕಾಗುತ್ತದೆ. ಇನ್ನು ಮಾನ್ಯ ಸುಬ್ಬಾರೆಡ್ಡಿಯವರು ಹಾಪ್‌ಕಾಮ್ಸ್ ಅದೆಲ್ಲಾ ಕ್ಲೀನ್ ಮಾಡಬೇಕು ಎಂದು ಹೇಳಿದ್ದಾರೆ. ನಾವು ಅದನ್ನೆಲ್ಲಾ ಮಾಡುವವರಲ್ಲ. ಈಗಾಗಲೇ ನೋಟೀಸ್ ಕೊಟ್ಟಾಗಿದೆ. ಅವರು ಅದನ್ನು ಮಾಡದೇ ಹೋದರೆ ಕಾಲಮಿತಿ ಇಟ್ಟುಕೊಂಡು ಇನ್ನೊಂದು ಸಲ ಬೇಕಾದರೆ ನೋಟೀಸ್ ಕೊಟ್ಟು ಮುನಿಸಿಪಾಲಿಟಿಯವರು ಮಾಡದೇ ಹೋದರೆ ಪ್ರಾಸಿಕ್ಯೂಷನ್ ಮಾಡಿಸಿ ಬಿಡುತ್ತೇನೆ. ಅದು ನನಗೆ ಗೊತ್ತಿದೆ ಮತ್ತು ನಾನು ಈಗಾಗಲೇ ಯೋಚನೆ ಮಾಡುತ್ತಿದ್ದೇನೆ. ಅಷ್ಟೇ ಅಲ್ಲ, ಮುನಿಸಿಪಾಲಿಟಿಯವರು ಯೂರಿನಲ್ಸ್ ಕೂಡ ಸರಿಯಾದ ರೀತಿಯಲ್ಲಿ ಮಾಡಿಲ್ಲ. ಎಲ್ಲಿ ಬೇಕಾದರೂ ಅಲ್ಲಿ ಮೂತ್ರವಿಸರ್ಜನೆ ಮಾಡತಕ್ಕದ್ದನ್ನು ನೋಡುತ್ತಿದ್ದೇವೆ. ಆದರಲ್ಲೂ ಗಂಡಸರಿಗೆ ಮಾನಮರ್ಯಾದೆ ಎನ್ನುವುದೇ ಇಲ್ಲ. ಹೆಣ್ಣುಮಕ್ಕಳು ಮನೆಯಿಂದ ಹೊರಗಡೆ ಬರುತ್ತಾರೆ. ಆದರೆ ಇವರಿಗೆ ಏನೂ ಇಲ್ಲ. ಗಂಡಸರು ಸಲೀಸಾಗಿ ಬಂದುಬಿಡುತ್ತಾರೆ....

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಅದಷ್ಟು ಬಾತ್‌ರೂಮ್‌ಗಳನ್ನು ಮಾಡಿಸಬೇಕು.

ಶ್ರೀ ಕೆ.ಹೆಚ್. ರಂಗನಾಥ್ : ಬಾತ್‌ರೂಮ್‌ನ್ನು ನೀವು ಮಾಡಿಸಬೇಕು ಸ್ವಾಮಿ. ನಿಮ್ಮ ನಿಮ್ಮ ಕ್ಷೇತ್ರದಲ್ಲಿ ಕಾರ್ಪೊರೇಷನ್ ಬರುತ್ತದೆ, ನೀವು ಮಾಡಿಸಬೇಕು. ನೀವು ಏನು ಕೆಲಸ ಮಾಡುತ್ತೀರಿ? ಸುಬ್ಬಾರೆಡ್ಡಿಯವರ ಬಗ್ಗೆ ನಾನು ಹೇಳಬಾರದು ಅಂತ ಇದ್ದೆ. ಒಂದುಸಾರಿ ಬನ್ನೇರುಘಟ್ಟದಲ್ಲಿ ತೊಂದರೆಯಾಗುತ್ತಿದೆ, ಬನ್ನಿ ಎಂದು ಹೇಳಿಬಿಟ್ಟರು. ನಾನು ಬೆಳಿಗ್ಗೆ ಅಷ್ಟು ಹೊತ್ತಿಗೆ ಸ್ನಾನ ಎಲ್ಲಾ ಮಾಡಿ ರೆಡಿಯಾಗಿ ಹೋದರೆ ಆನಾಮಿನೇ ಪತ್ತೆ ಇಲ್ಲ. ಸುಬ್ಬಾರೆಡ್ಡಿಯವರು ಇಂತಹ ಕೆಲಸ ಮಾಡುತ್ತಾರೆ.

ಛೇರ್ಮನ್ : ಸಾಕು ಬಿಡಿ.

(ಈ) ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲ್ಲೂಕು, ಕುಂತೂರಿನಲ್ಲಿರುವ ಶ್ರೀ ಮಹದೇಶ್ವರ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ಬೆಳೆಗಾರರಿಗೆ ಸರಿಯಾಗಿ ಹಣ ಪಾವತಿ ಮಾಡದಿರುವ ಬಗ್ಗೆ

ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೆಮಾರಹಳ್ಳಿ) : ಮಾನ್ಯ ಅಧ್ಯಕ್ಷರೇ, ಕೊಳ್ಳೇಗಾಲ ತಾಲ್ಲೂಕು ಕುಂತೂರಿನ ಶ್ರೀ ಮಹದೇಶ್ವರ ಸಕ್ಕರೆ ಕಾರ್ಖಾನೆಯು ಸರಿಯಾಗಿ ಕಾರ್ಯನಿರ್ವಹಿಸದಿರುವ ಬಗ್ಗೆ ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರ ಗಮನ ಸೆಳೆಯುತ್ತೇನೆ.

+ ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಮಂತ್ರಿ) : ಅಧ್ಯಕ್ಷರೇ, ನನ್ನ ಹೇಳಿಕೆ ಹೀಗಿದೆ.

ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಶ್ರೀ ಮಹದೇಶ್ವರ ಸಕ್ಕರೆ ಕಾರ್ಖಾನೆಯು ಮೊದಲು ಸಹಕಾರಿ ರಂಗದಲ್ಲಿ ಕಾರ್ಯ ನಿರ್ವಹಿಸುತ್ತಿತ್ತು. ನಂತರ ಅದನ್ನು ಸಮಾಪನೆಗೊಳಿಸಿ ಮೆ:ಖೋಡೆಯವರಿಗೆ ಮಾರಾಟ ಮಾಡಲಾಯಿತು. ಮೆ:ಖೋಡೆಯವರು ತದನಂತರ ಅದನ್ನು ನಾಗಾರ್ಜುನ ಗ್ರೂಪ್ ನವರಿಗೆ ಹಸ್ತಾಂತರಿಸಿರುತ್ತಾರೆ. ಈಗ ಪುನಃ ಸದರಿ ಕಾರ್ಖಾನೆಯ ಆಡಳಿತವನ್ನು ನಾಗಾರ್ಜುನ ಗ್ರೂಪ್‌ನವರು ಮುಂಬಯಿ ಮೂಲದ ಆರುಣ ಶುಗರ್ಸ್ ನವರಿಗೆ ವರ್ಗಾಯಿಸಿರುತ್ತಾರೆ. ವರ್ಗಾವಣೆಯ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿರುವುದಿಲ್ಲ. ಈ ರೀತಿ ಆಗಿಂದಾಗ್ಗೆ ಆಡಳಿತ ಮಂಡಳಿಯ ಬದಲಾವಣೆ ಹಲವಾರು ಸಮಸ್ಯೆಗಳಿಗೆ ಕಾರಣವಾಗಿ ಕಾರ್ಖಾನೆಯು ಕಬ್ಬು ಅರೆಯುವ ಪ್ರಕ್ರಿಯೆಯೂ ಕೂಡಾ ಕುಂಠಿತಗೊಂಡಿದ್ದುಂಟು.

ಈ ಸಕ್ಕರೆ ಕಾರ್ಖಾನೆಗೆ 10,300 ಎಕರೆ ಕಬ್ಬು ಬೆಳೆ ಪ್ರದೇಶ ಇದ್ದು, ಒಂದು ವರ್ಷಕ್ಕೆ 3 ಲಕ್ಷ ಟನ್ ಕಬ್ಬು ಅರೆಯುವ ಸಾಮರ್ಥ್ಯ ಹೊಂದಿರುತ್ತದೆ. ದಿನಾಂಕ: 8-3-2001ರ ವರೆಗೆ 1.77 ಲಕ್ಷ ಟನ್ ಕಬ್ಬನ್ನು ಖರೀದಿಸಿದ್ದು ಉಳಿಕೆ 1.23 ಲಕ್ಷ ಟನ್ ಖರೀದಿಸಬೇಕಾಗಿರುತ್ತದೆ. 2001-01ನೇ ಸಾಲಿಗೆ ಸಕ್ಕರೆ ಕಾರ್ಖಾನೆಯು ಪ್ರತಿ ಟನ್ನಿಗೆ ರೂ.845 ಗಳನ್ನು ಕಬ್ಬು ಬೆಳೆಗಾರರಿಗೆ ಪಾವತಿ ಮಾಡುತ್ತಿದೆ. ಕಾರ್ಖಾನೆಯು ಕಬ್ಬು ಸರಬರಾಜು ಮಾಡಿರುವ ರೈತರಿಗೆ ಪಾವತಿಸಬೇಕಾದ ರೂ.1498 ಲಕ್ಷಗಳ ಪೈಕಿ ಈವರೆಗೆ ರೂ.400.00 ಲಕ್ಷ ಪಾವತಿಸಿದ್ದು, ಉಳಿದ ರೂ.1097.08 ಲಕ್ಷ ಹಣ ಪಾವತಿಸಬೇಕಾಗಿದೆ.